International Journal of Kannada Research
www.kannadajournal.com

ISSN: 2454–5813
IJKR 2018; 4(3): 220-221
© 2018 IJKR
www.kannadajournal.com
Received: 08-05-2018
Accepted: 09-06-2018

**ವಿಜಯಕುಮಾರ ಬಿ. ಬೀಳಗಿ**
Research Scholar
Department of Kannada
Gulabarga University Kalburgi,
Karnatak, India

**Correspondence**
**ವಿಜಯಕುಮಾರ ಬಿ. ಬೀಳಗಿ**
Research Scholar
Department of Kannada
Gulabarga University Kalburgi,
Karnatak, India

# ಡಾ.ಎಸ್.ಪಿ. ಸುಳ್ಳದ್

**ವಿಜಯಕುಮಾರ ಬಿ. ಬೀಳಗಿ**

**ಪೀಠಿಕೆ**

ಡಾ.ಎಸ್.ಪಿ. ಸುಳ್ಳದ್ ಅವರು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ವೃತ್ತಿನಿರತರಾಗಿರುವ ಇವರು, ಪ್ರವೃತ್ತಿಯಿಂದ ಕವಿಯಾಗಿ, ಸಾಹಿತಿಯಾಗಿ ಹಾಗೂ ಹೋರಾಟಗಾರರಾಗಿ ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ. ತಮ್ಮೊಳಗಿನ ಸೃಜನಶೀಲ ಪ್ರಜ್ಞೆಯಿಂದ ಸಮಾಜದಲ್ಲಿನ ಅನ್ಯಾಯ, ದೌರ್ಜನ್ಯ, ದಬ್ಬಾಳಿಕೆಗಳಿಗೆ ಅಕ್ಷರದ ಮೂಲಕ ವಿರೋಧಿಸಿದ್ದಾರೆ.

ಬುದ್ಧ, ಬಸವ, ಕನಕದಾಸ, ಜ್ಯೋತಿಭಾ ಫುಲೆ, ಡಾ.ಅಂಬೇಡ್ಕರ್ ಹಾಗೂ ಕುವೆಂಪುರವರ ವೈಚಾರಿಕ ಚಿಂತನೆಗಳನ್ನು ಮೈಗೂಡಿಸಿಕೊಂಡಿದ್ದಾರೆ. 'ನನ್ನ ಹಾಡು' ಎಂಬ ಕವನ ಸಂಕಲನದಲ್ಲಿ ಒಟ್ಟು ೪೧ ಕವನಗಳಿದ್ದು, ಅಸ್ಪೃಶ್ಯತೆ, ಮೂಢನಂಬಿಕೆಗಳ ವಿರುದ್ಧ ಹೋರಾಟ ಮಾಡುವ ಮನೋಭಾವ ಇವರ ಕವನಗಳಲ್ಲಿ ಕಂಡುಬರುತ್ತದೆ. ಜೊತೆಗೆ ಪರಿಸರ, ನೆಲ, ಜಲ ಮುಂತಾದವುಗಳ ಕುರಿತು ತುಂಬಾ ಅಂತಃ ಕರಣದಿಂದ ಮಾತನಾಡುವ ಕವನಗಳು ಇಲ್ಲಿವೆ. ರೈತ ಚಳವಳಿ, ದಲಿತ ಚಳವಳಿ, ಬಂಡಾಯ ಸಾಹಿತ್ಯ ಚಳವಳಿ ಮುಂತಾದ ವಿಚಾರಗಳು ಇವರ ಕಾವ್ಯದ ಧ್ವನಿಯಾಗಿದೆ.

ದೇಶಕ್ಕೆ ಶಾಂತಿ ಮಂತ್ರವನ್ನು ಜಪಿಸಿದ ಬೌದ್ಧ ಧರ್ಮದ ಸಂಸ್ಥಾಪಕನಾದ ಗೌತಮ ಬುದ್ಧನನ್ನು ಕುರಿತು ಪಡೆದುಕೊಂಡ ಜ್ಞಾನವನ್ನು ಸಾರಿದ ತತ್ವಜ್ಞಾನವನ್ನು ಕುರಿತ 'ನಮೋ ಬುದ್ಧಾಯ' ಎಂಬ ಕವನದಲ್ಲಿ ಹೀಗೆ ಅಭಿವ್ಯಕ್ತಿಸಿದ್ದಾರೆ.

"ಸಕಲ ಪ್ರಾಣಿ ಪಕ್ಷಿಗಳಿಗೆ
ದಯೆ ಅಂತಃ ಕರುಣೆ ತೋರಸಿದೆ
ವರ್ಗ-ವರ್ಣ ಭೇದವು ಬೇಡೆಂದು ಬೋಧಿಸಿದೆ
ವೈಜ್ಞಾನಿಕ ತಳಹದಿಯಲ್ಲಿ ಧರ್ಮವು ಬೆಳೆಸಿದೆ
ವಿಶ್ವಕ್ಕೆ ಬೆಳಕು ನೀಡಿದ 'ಬುದ್ಧ ನಿನಗೆ
ನಮೋ-ನಮೋ-ಬುದ್ಧ ನಿನಗೆ ನಮೋ"[೧]
(ನನ್ನ ಹಾಡು - ಎಸ್.ಪಿ.ಸುಳ್ಳದ್ ಪು.ಸಂ.-೨)

ಈ ಬ್ರಹ್ಮಾಂಡದಲ್ಲಿರುವ ಸಕಲ ಪ್ರಾಣಿ ಪಕ್ಷಿಗಳುಗೂ ದಯೆ ಅಂತಃಕರುಣೆ ಸಾರಿಸಿ ಅವುಗಳಿಗೂ ಜೀವಿಸುವ ಹಕ್ಕು ಇದೆ ತಮ್ಮಷ್ಟಕ್ಕೆ ಬದುಕು ಕಟ್ಟಿಕೊಳ್ಳುವ ಸ್ವಾತಂತ್ರ್ಯ ಇದೆ ಎನ್ನುವ ಕಲ್ಪನೆಯೂ ಅಂದೇ ಗೌತಮ ಬುದ್ಧರು ಮೂಡಿಸಿದರು. ಮೂರು ಪ್ರಶ್ನೆಗಳಿಗಾಗಿ ದೀರ್ಘವಾದ ತಪಸ್ಸನ್ನು ಕೈಗೊಂಡು ನರಭಕ್ಷಕ ಅಂಗುಲಿ ಮಾಲಾನಂತಹವರನ್ನೂ ಮಾನವ ಧರ್ಮಕ್ಕೆ ಪರಿವರ್ತಿಸಿ ತನ್ನ ಬೋಧನೆಯಿಂದ ಮನುಷ್ಯನನ್ನಾಗಿ ಬಾಳುವಂತೆ ಮಾಡಿದ. ತನ್ನ ಶಿಷ್ಯರಿಗೆ ಆಸೆಯೇ ದುಃಖಕ್ಕೆ ಮೂಲ ಕಾರಣ ಎಂದು ಸಾರಿದ. ವರ್ಗ - ವರ್ಣದ ಬಗ್ಗೆ ತಿಳಿಸುತ್ತಾ ಗಂಡು-ಹೆಣ್ಣು ಒಂದೇ ಎಂಬ ಸಾರ್ವತ್ರಿಕ ತತ್ವ ಸಾರಿದ ಬುದ್ಧನಿಗೆ ಕವಿಗಳು ನಮನ ಸಲ್ಲಿಸಿದ್ದಾರೆ.

"ಮುಟ್ಟಿ ತಟ್ಟಿ ಎನ್ನುವ ಮತಾಂಧರಿಗೆ
ಒಟ್ಟೆ ಬಿಗಾರಿ ಮಾಡಿಸುವವರಿಗೆ
ಶಿಕ್ಷೆಗೆ ಕಾನೂನು ಮಾಡಿದೆ

ಪ್ರಪಂಚಕ್ಕೆ ಮೀರುವಂಥ
ಭಾರತಕ್ಕೆ ಸಂವಿಧಾನ ಕೊಟ್ಟೆ
ಓ. ಬಾಬಾ ಸಾಹೇಬ ಅಂಬೇಡ್ಕರ್"[೨]
(ನನ್ನ ಹಾಡು – ಎಸ್.ಪಿ.ಸುಳ್ಳದ್ ಪು.ಸಂ.–೨)

ದಲಿತ ಜನಾಂಗವನ್ನು ಉದ್ಧರಿಸಿ, ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಡಾ.ಬಾಬಾ ಸಾಹೇಬ ಅಂಬೇಡ್ಕರ್‌ರ ಪ್ರಯತ್ನ ತುಂಬಾ ಮಹತ್ತರವಾದುದ್ದು. ಅವರು ಸಮಾಜದಲ್ಲಿನ ಜಾತಿ, ಮೌಢ್ಯತೆ ಅಳಿಸಿ ಜನರನ್ನು ಬಡಿದೆಬ್ಬಿಸುವ ರೀತಿ ಲೇಖಕರು ತಮ್ಮ ಕವನದಲ್ಲಿ ಕಟ್ಟಿಕೊಟ್ಟಿದ್ದಾರೆ. ಜಾತಿಯತೆಯಿಂದ ಜಿಡ್ಡುಗಟ್ಟಿದ ಸಮಾಜಕ್ಕೆ ಡಾ.ಬಾಬಾ ಸಾಹೇಬರ ಕೊಡುಗೆ ತುಂಬಾ ಮಹತ್ತರವಾದುದ್ದು. ಅವರು ರಚಿಸಿದ ಕಾನೂನು ಇಂದು ಸಮಾಜದಲ್ಲಿ ಸಾಕಷ್ಟು ಅರಿವು ಮೂಡಿಸಿದ್ದೂ, ಆ ಮೂಲಕ ಜನರು ಸಂಘಟಿತರಾಗಿ ಸ್ವಾಭಿಮಾನಿಗಳಾಗಿ ಜಾತಿಯತೆಯನ್ನು ಹೋಗಲಾಡಿಸಲು ತಮ್ಮ ಹಾದಿಯಲ್ಲೇ ಪ್ರಯತ್ನಿಸಿದ್ದಾರೆಂದು ಕವಿಯೂ ಚಿತ್ರಿಸಿದ್ದಾರೆ.

ಸಾಹಿತ್ಯ ರಚನೆಯ ಜೊತೆಗೆ ಹೋರಾಟಗಳಲ್ಲಿ ಭಾಗಿಯಾದವರು ಬಹುಶಃ ಅವರ ಸಾಹಿತ್ಯ ರಚನೆಗೆ ಅವರಲ್ಲಿರುವ ಹೋರಾಟದ ಮನೋಭಾವವೇ ಕಾರಣವಾಗಿರಬಹುದು. ಸಾಹಿತ್ಯ ಕೃಷಿಗಿಂತ ಹೋರಾಟ ಚಳವಳಿಗಳಲ್ಲಿ ಹೆಚ್ಚು ಶ್ರಮಿಸಿದ್ದರಿಂದ ವಿವಿಧ ಸಂಘಟನೆಗಳ ಒಡನಾಡಿಯೂ ಅವರಿಗಿತ್ತು. ಇಂದಿನ ಹೋರಾಟಗಳು ತಮ್ಮ ಬದ್ಧತೆಯನ್ನೇ ಕಳೆದುಕೊಂಡಿವೆ ಎಂಬ ಕವಿಯ ಮನೋಭಾವ ಕಲಕಿದಂತಿದೆ.

"ಎಲ್ಲರಲ್ಲಿ ಇರುವುದು ಒಂದೆ ರಕ್ತ
ಒಂದೇ ಭಾವ ಒಂದೇ ವಿಚಾರ
ಎಲ್ಲಾ ಬಣಗಳ ಬಣ್ಣ ಒಂದೆ
ಆಚಾರ–ವಿಚಾರ–ಪ್ರಚಾರ ಒಂದೆ
ಅದೇ ಹಾಡು, ಭಾಷಣ ಘೋಷಣೆ
ಕೆಂಪು ಮರದಲಿ ನೀಲಿ ಹೂವುಗಳಾಗಿ ಹಬ್ಬ ಮಾಡುವ ಬನ್ನಿ
ಅಂಬೇಡ್ಕರರಿಗೆ ಜೈ ಜೈಕಾರ ಹೇಳೋಣ ಬನ್ನಿ
ಕೂಡಿ ಹಾಡೋಣ, ಒಂದಾಗಿ ಹೋಗೋಣ ॥ ಹಬ್ಬ ॥"[೩]
(ನನ್ನ ಹಾಡು – ಎಸ್.ಪಿ.ಸುಳ್ಳದ್ ಪು.ಸಂ.–೨)

ಯಾಕೆ ಈ ರೀತಿಯ ತಾರತಮ್ಯ ಎಂಬುದನ್ನು ಕವಿಯು ಇಲ್ಲಿ ವಿಷಾದಿಸುತ್ತಾರೆ. ಎಲ್ಲರಲ್ಲಿಯೂ ಇರುವದು ಒಂದೆ ರಕ್ತ ಎಂಬುದನ್ನು ಅರಿತವರು ಕೂಡ ಕೆಲವರನ್ನು ಯಾಕೆ ದೂರ ಮಾಡಿ ವಿಚಿತ್ರವಾದ ಭಾವನೆಗಳಿಂದ ನೋಡುತ್ತಾರೆ ಎಂಬುದನ್ನು ಚಿತ್ರಿಸುತ್ತ ವರ್ಗಗಳು ಒಂದೆ ಕುಲವು ಒಂದೆ ಆಚಾರ–ವಿಚಾರ ಪ್ರಚಾರವು ಒಂದೆ, ಆ ದೇವರು–ದಿಂಡಿರು ಮಾತ್ರ ಬೇರೆಯಾಗಿ ಭಾಷಣಗಳಲ್ಲಿ ನಾವೆಲ್ಲರೂ ಭಾರತೀಯರು ಭಾರತ ಮಾತೆಯ ಪುತ್ರರು ಎಂದು ಸಾರಿ ಸಾರಿ ಹೇಳುವ ಮನುವಾದಿಗಳನ್ನು ಬದಿಗಿಟ್ಟು ಕೆಂಪು ರಕ್ತದ ಮರದಲ್ಲಿ ನೀಲಿ ಹೂವಾಗಿ ಅಂದರೆ ಬಾಬಾ ಸಾಹೇಬರು ತೋರಿಸಿದ ನಮಗಾಗಿ ತಂದ ಆಕಾಶದ ಬಣ್ಣ ನೀಲಿ ನಾವು ಈ ಮೂಲ ನಿವಾಸಿಗಳು ಎಂಬ ನಾನಾ ದಿಕ್ಕಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಹಾಡೋಣ ಬನ್ನಿ, ಜೈಕಾರ ಹೇಳೋಣ ಬನ್ನಿ, ಕೂಡಿ ಒಂದಾಗಿ ಬಾಳೋಣ ಬನ್ನಿ ನಮ್ಮ ತನವನ್ನು ನಾವು ಕಂಡುಕೊಳ್ಳೋಣ ಬನ್ನಿ ಎಂಬುದನ್ನು ಇಲ್ಲಿ ಮಾರ್ಮಿಕವಾಗಿ ಕವಿ ತಿಳಿಸಿದ್ದಾರೆ.

"ಜಗದಲ್ಲಿ ಹೆಸರಾದ ಗೋಳ ಗುಮ್ಮಟ
ಭಾರತದ ಕಳಸವಾದ ಕಾಶ್ಮೀರ
ಶಿಲ್ಪ ಕಲೆಗೆ ಶ್ರೇಷ್ಠವಾದ ಕರ್ನಾಟಕ
ವಿವಿಧ ಧರ್ಮ ಭಾಷಣಗಳಿಂದ ಬಾಳುವೆ ನೀ ಭಾರತಿ ॥೧॥
ಬುದ್ಧ–ಬಸವ–ಅಂಬೇಡ್ಕರ್
ಗಾಂಧಿ–ನೆಹರೂ–ಸುಭಾಷರ
ಕಬೀರ–ನಾನಕ–ವಿವೇಕರಿಗೆ
ಜನ್ಮವಿತ್ತ ತಾಯಿ ಭಾರತಿ ॥೨॥
ಮದರ ಥೆರೆಸ್ಸಾರಂತೆ ಹೊತ್ತ ಮಾತೃ ಹೃದಯ ಭಾರತಿ
ಮಂಡೇಲಾರಿಗೆ ತನ್ನ ಹೆಸರ ಬಿರುದು ಕೊಟ್ಟ ಭಾರತಿ
ಅಮೇರಿಕಾ ರಷ್ಯಾಕಷ್ಟೇ ಅಲ್ಲ
ಎಲ್ಲರೆದೆಗೂ ಭಾರತಿ
ವಿಶ್ವಕ್ಕೆಲ್ಲ ಶಾಂತಿ ಮಂತ್ರ ನೀ ಭಾರತಿ"[೪]
(ಗರ್ದಿಗಮ್ಮತ್ – ಎಸ್.ಪಿ.ಸುಳ್ಳದ್. ಪು.ಸಂ.೮)

ಭಾರತ ದೇಶವು ಹಲವು ವೈವಿಧ್ಯತೆಗಳಿಗೆ ಹೆಸರಾಗಿದೆ. ಕಾಶ್ಮೀರ, ಶಿಲ್ಪ, ಗೋಳಗುಮ್ಮಟ, ವಿವಿಧ ಧರ್ಮಗಳಿಗೆ ಸ್ಥಾನ ನೀಡಿದ ಭಾರತ ಭೂಮಿ ಮದರ ಥೆರೆಸ್ಸಾ, ನೆಲ್ಸನ್ ಮಂಡೇಲಾ, ಬುದ್ಧ–ಬಸವ–ಅಂಬೇಡ್ಕರ್‌ರ ವಿಚಾರಗಳನ್ನು ಭಾರತವು ವಿಶ್ವಕ್ಕೆ ಸಾರುತ್ತಿದೆ ಎಂಬ ವಿಚಾರವನ್ನು ವ್ಯಕ್ತಪಡಿಸುತ್ತಾರೆ.

ಅಮರನಾದೆ' ಎಂಬ ಕವನವು ದಲಿತರನ್ನು ಉದ್ಧಾರ ಮಾಡಿದ ಡಾ.ಬಿ.ಆರ್.ಅಂಬೇಡ್ಕರ್‌ರವರ ಜೀವನ, ಸಾಧನೆಯನ್ನು ತಿಳಿಸುತ್ತದೆ. ಇಲ್ಲಿ ಕವಿಗಳು ತಮ್ಮ ಭಾವನೆಗಳಿಗೆ ಶಬ್ದರೂಪ ಕೊಟ್ಟು ನಿರ್ಮಿಸಿರುವುದು ಕಾಣಬಹುದಾಗಿದೆ.